e-mail: ksoulwc@gmail.com
Phone: 8690544544

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತ ಗಂಗೋತ್ರಿ, ಮೈಸೂರು– 570006

## ಕಲಿಕಾರ್ಥಿ ಕಲ್ಯಾಣ ಕೇಂದ್ರ

---

### 25ನೇ ಮಾರ್ಗದರ್ಶಿ ಬೆಳ್ಳಿ ಹಬ್ಬ

### ವಿದ್ಯಾರ್ಥಿ–ಅಧಿಕಾರಿಗಳ ನೇರ ಸಂವಾದ ಕಾರ್ಯಕ್ರಮದ ವರದಿ

25ನೇ ಮಾರ್ಗದರ್ಶಿ ಬೆಳ್ಳಿ ಹಬ್ಬ ಕಾರ್ಯಕ್ರಮವನ್ನು ದಿನಾಂಕ 13.06.2023 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಬೆಳ್ಳಿಗ್ಗೆ 11 ಗಂಟೆಗೆ ಕಲಿಕಾರ್ಥಿ ಕಲ್ಯಾಣ ಕೇಂದ್ರದಲ್ಲಿ ನೆರವೇರಿಸಲಾಯಿತು. ಮಾನ್ಯ ಕುಲಸಚಿವರು, ಡೀನ್ ಅಧ್ಯಯನರವರು, ಮುಖ್ಯ ಅತಿಥಿಗಳಾಗಿ ಶ್ರೀ ಅಂಶಿ ಪ್ರಸನ್ನಕುಮಾರ್, ಸಂಪಾದಕರು ಕನ್ನಡಪ್ರಭ ಮೈಸೂರು ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಲಾಯಿತು.

ಶ್ರೀಮತಿ ನೇತ್ರಾವತಿಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಶ್ರೀಮತಿ ಕೋಮಲ ಎಂ.ಹೆಚ್. ಅಧೀಕ್ಷಕಿ ಕ.ಕ.ಕೇ. ಇವರು ಅತಿಥಿಗಳನ್ನು ಸ್ವಾಗತಿಸಿದರು. ಡಾ. ಸುಧಾಕರ ಹೊಸಳ್ಳಿ, ಸಂಯೋಜನಾಧಿಕಾರಿ, ಕ.ಕ.ಕೇ. ಇವರು ಪ್ರಾಸ್ತವಿಕ ನುಡಿಗಳನ್ನಾಡಿ ಕಲಿಕಾರ್ಥಿ ಕಲ್ಯಾಣ ಕೇಂದ್ರವು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಮಾರ್ಗದರ್ಶಿಯ ಮುಖಾಂತರ ಇನ್ನಷ್ಟು ಪರಿಣಾಮಕಾರಿಯಾಗಿ ಪರಿಹರಿಸುತ್ತಿರುವ ಬಗೆಯನ್ನು ವಿಸ್ತೃತವಾಗಿ ವಿವರಿಸಿದರು.

ಮಾನ್ಯ ಕುಲಪತಿಗಳು ಗಿಡಕ್ಕೆ ನೀರೆರೆದು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮಾನ್ಯ ಕುಲಪತಿಗಳು ಅಧ್ಯಕ್ಷೀಯ ಭಾಷಣದಲ್ಲಿ ಕರಾಮುವಿಯ ವಿದ್ಯಾರ್ಥಿಗಳಿಗೆ ಪ್ರವೇಶಾತಿ, ಅಂಕಪಟ್ಟಿ, ನೈಜ ಪ್ರಮಾಣ ಪತ್ರ, ಸಿದ್ಧಪಾಠ, ಇವುಗಳಿಗೆ ಸಂಬಂಧಿಸಿದ ನಿಗದಿತ ವಿಭಾಗಗ ಳಿಂದ ಮಾಹಿತಿಯನ್ನು ಕ್ರೂಢೀಕರಿಸಿ ವಿದ್ಯಾರ್ಥಿಗಳಿಗೆ ಒದಗಿಸಬೇಕೆಂದು ಹೇಳಿದರು. ಆತಂರಿಕ ನಿಬಂಧನೆಯನ್ನು ಅಪ್‌ಲೋಡ್ ಮಾಡಲು ಇರುವ ಅಕಡೆಮಿಕ್ ಪ್ಲಾಟ್‌ಫಾರಂ ಘಟಕದ ಬಗ್ಗೆ ವಿದ್ಯಾರ್ಥಿಗಳಿಗೆ ಸೂಕ್ತ ಮಾಹಿತಿಯನ್ನು ನೀಡಬೇಕೆಂದು ತಿಳಿಸಿದರು. ಕ.ರಾ.ಮು.ವಿ.ಯು ರಾಜ್ಯವ್ಯಾಪಿ ಕಾರ್ಯಕ್ಷೇತ್ರವನ್ನು ಹೊಂದಿದ್ದು, ವಿದ್ಯಾರ್ಥಿಗಳು ಪರಸ್ಥಳಗಳಿಂದ ಕೇಂದ್ರಸ್ಥಾನಕ್ಕೆ ಮಾಹಿತಿಗಾಗಿ ಬರುವುದು ಕಷ್ಟವಾಗುವುದು. ಆ ಉದ್ದೇಶದಿಂದಲೇ ವಿಶ್ವವಿದ್ಯಾನಿಲಯದಲ್ಲಿ ಕಲಿಕಾರ್ಥಿ ಕಲ್ಯಾಣ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ವಿದ್ಯಾರ್ಥಿಗಳ ಸಮಸ್ಯೆಗಳನ್ನು ಶೂನ್ಯಗೊಳಿಸಬೇಕು ಎಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟನೆಯ ನಂತರ ಬಂದ ವಿದ್ಯಾರ್ಥಿಗಳ ಕರೆಗಳಿಗೆ ಮಾನ್ಯ ಕುಲಪತಿಗಳು, ಮಾನ್ಯ ಕುಲಸಚಿವರು, ಡೀನ್ (ಅಧ್ಯಯನ ಕೇಂದ್ರಗಳು)ರವರು, ಉಪಕುಲಸಚಿವರು (ಪರೀಕ್ಷಾಂಗ) ಹಾಗೂ ಕಲಿಕಾರ್ಥಿ ಕಲ್ಯಾಣ ಕೇಂದ್ರದ ಸಂಯೋಜನಾಧಿಕಾರಿಯವರು ವಿದ್ಯಾರ್ಥಿಗಳ ಕರೆಗಳನ್ನು ಖುದ್ದು ಸ್ವೀಕರಿಸಿ ಸಮಾಲೋಚಿಸಿ, ಸೂಕ್ತ ಮಾಹಿತಿ/ಪರಿಹಾರವನ್ನು ನೀಡಿ 25ನೇ ವಿದ್ಯಾರ್ಥಿ–ಅಧಿಕಾರಿ ನೇರ ಸಂವಾದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಮಾನ್ಯ ಕುಲಸಚಿವರಾದ ಪ್ರೊ.ಕೆ.ಬಿ. ಪ್ರವೀಣ ಅವರು ಮಾತನಾಡಿ ಕಲಿಕಾರ್ಥಿ ಕಲ್ಯಾಣ ಕೇಂದ್ರದ ಸಿಬ್ಬಂದಿಗಳು ತುಂಬಾ ಸಕ್ರಿಯವಾಗಿ ಕೆಲಸ ಮಾಡಬೇಕು. ಇದೊಂದು ಸಂವಹನ ಪ್ರಕ್ರಿಯೆ ಆದ್ದರಿಂದ ವಿದ್ಯಾರ್ಥಿಗಳಿಂದ ಬರುವ ಪ್ರತಿಯೊಂದು ಕರೆಯನ್ನು ಸ್ವೀಕರಿಸಬೇಕು ಹಾಗೂ ಮಿಸ್ಡ್‌ಕಾಲ್ ಇದ್ದರೆ ಮರಳಿ ಕರೆ ಮಾಡಬೇಕು. ವಿದ್ಯಾರ್ಥಿಗಳು ಎಷ್ಟೇ ಸಹನೆ ಕಳೆದುಕೊಂಡರು ಸಹ ಸಿಬ್ಬಂದಿಗಳು ಅತ್ಯಂತ ತಾಳ್ಮೆಯಿಂದ ವಿದ್ಯಾರ್ಥಿಗಳ ಕರೆ ಸ್ವೀಕರಿಸಿ ಮಾತನಾಡುತ್ತಾ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಬೇಕೆಂದು ತಿಳಿ ಹೇಳಿದರು. ಈ ಹಿಂದೆ ತಾಂತ್ರಿಕ ಕಾರಣಗಳಿಂದ ಆಗುತ್ತಿದ್ದ ವಿಳಂಬಕ್ಕೆ ಪರಿಹಾರ ಕಂಡು ಹಿಡಿಯಲಾಗಿದೆ, ಇನ್ನು ಮುಂದೆ ನಿಗದಿತ ಸಮಯದಲ್ಲಿ ಪರೀಕ್ಷೆಗಳ ಆಯೋಜನೆ ಮತ್ತು ಪಠ್ಯಪುಸ್ತಕಗಳು ವಿತರಣೆಯಾಗಲಿವೆ ಎಂದರು.

ಮುಖ್ಯ ಅತಿಥಿಗಳಾದ ಶ್ರೀ ಅಂಶಿ ಪ್ರಸನ್ನ ಕುಮಾರ್ ಅವರು ಮಾತನಾಡುತ್ತಾ ಇದು ವಿದ್ಯಾರ್ಥಿ ಸ್ನೇಹಿ ಕಾರ್ಯಕ್ರಮ ಮೊದಲೆಲ್ಲಾ ಕ.ರಾ.ಮು.ವಿ.ಬಗ್ಗೆ ಸಿದ್ಧಪಾಠಗಳು ತಲುಪಿಲ್ಲ ಎಂಬ ಬಗ್ಗೆ ದೂರುಗಳು ಬರುತ್ತಿದ್ದವು. ಈಗ ದೂರುಗಳು ಗಣನೀಯವಾಗಿ ಕಡಿಮೆಯಾಗಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ. ರಾಮನಾಥಂ ನಾಯ್ಡು ಡೀನ್ ಅಧ್ಯಯನ ಕೇಂದ್ರಗಳು ಅವರು ಮಾತನಾಡುತ್ತಾ, ವಿದ್ಯಾರ್ಥಿಗಳ ಸಮಸ್ಯೆಗಳನ್ನು ಸಾಧ್ಯವಾದಷ್ಟು ತ್ವರಿತವಾಗಿ ನಿವಾರಿಸಬೇಕೆಂದು ಅಭಿಪ್ರಾಯಪಟ್ಟರು.

ಪರೀಕ್ಷಾ ವಿಭಾಗದ ಉಪ ಕುಲಸಚಿವರಾದ ಸತೀಶ್‌ರವರು ಮಾತನಾಡುತ್ತಾ ಕೆಲವೊಂದು ಚುನಾವಣೆಯಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರ ಪರೀಕ್ಷೆಗಳು ವಿಳಂಬವಾಗುತ್ತವೆ. ಇದನ್ನು ಹೊರತು ಪಡಿಸಿ ಶೈಕ್ಷಣಿಕ ವೇಳಾಪಟ್ಟಿಯಂತೆಯೆ ಪರೀಕ್ಷೆಗಳು ನಡೆಯುತ್ತವೆ ಎಂದು ತಿಳಿಸಿದರು.

SGRC ಯ ಮಾನ್ಯ ಸದಸ್ಯರಾದ ಪ್ರೊ. ಮಹದೇವ ಮೂರ್ತಿಯವರು, ಕಲಿಕಾರ್ಥಿ ಕಲ್ಯಾಣ ಕೇಂದ್ರದ ಸಿಬ್ಬಂದಿಗಳು ಇತರೇ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳು  ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶ್ರೀಮತಿ ರೂಪ ಹೆಚ್.ಎಸ್. ಡಿ.ಇ.ಓ., ಕ.ಕ.ಕೇ. ಇವರು ವಂದನಾರ್ಪಣೆ ಮಾಡುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಕುಲಸಚಿವರು

ಕಾರ್ಯಯೋಜನಾಧಿಕಾರಿ